ಅಸಲು ದಾವಾ ಸಂಖ್ಯೆ . 276 - 2014

ಪಿ.ಡಬ್ಲ್ಯೂ-1
ದಿಃ 18-12-2019
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ-

ನನ್ನ ಪ್ರಮಾಣ ಪತ್ರದಲ್ಲಿ 3 ನೇ ಪ್ರತಿವಾದಿಯು ಒತ್ತುವರಿ ಮಾಡಿದುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ನಾನು 3 ನೇ ಪ್ರತಿವಾದಿಯ ಜಾಗವನ್ನು ಒತ್ತುವರಿ ಮಾಡಿರುತ್ತೇನೆಂದರೆ ಸರಿಯಲ್ಲ . 3 ನೇ ಪ್ರತಿವಾದಿ ಯವರು ತಮ್ಮ ಆಸ್ತಿ ಸಂ 205/ 254 ರಲ್ಲಿ 20X 30 ವಿಸ್ತೀರ್ಣದಲ್ಲಿ ವ್ಲೆಂಡಿಗ್ ಶಾಪ್ ಕಟ್ಟಿಕೊಂಡು ಅದರ ಸುತ್ತಲೂ ಜಾಗ ಬಿಟ್ಟುಕೊಂಡಿರುತ್ತಾರೆ ಎಂದರೆ ಸರಿ . ಆದರೆ ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ ಎಂದರು . ದಾವಾ ಆಸ್ತಿಯ ಎ ಷಡ್ಯೂಲ್ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ . ನನಗೆ ಪ್ರತಿವಾದಿಗಳು ದಿಃ 05-06-2014 ರಂದು ಮನೆ ಕಟ್ಟಲು ತೊಂದರೆ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ನನ್ನ ಆಸ್ತಿಯಲ್ಲಿ ನಾನು ಇದ್ದೇನೆ 3 ನೇ ಪ್ರತಿವಾದಿಯ ಆಸ್ತಿಯಲ್ಲಿ ಅವರು ಇದ್ದಾರೆ ಎಂದರೆ ನಾನು ನನ್ನ ಆಸ್ತಿಯಲ್ಲಿ ಇದ್ದೇನೆ ಅವರು ಅವರ ಆಸ್ತಿಯಲ್ಲಿ ಇದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ದಾವಾದ ಬಿ ಷಡ್ಯೂಲ್ ಆಸ್ತಿಯನ್ನು ನಾನು ಪ್ರಕಾಶ್ ಬಿನ್ ಮಹಾದೇವಪ್ಪ ರವರಿಗೆ ಈಗಾಗಲೇ ಮಾರಾಟ ಮಾಡಿದು ಸದರಿ ಆಸ್ತಿಯಲ್ಲಿ ಅವರು ಮನೆ ಕಟ್ಟಿ ವಾಸವಿದ್ದಾರೆ ಎಂದರೆ ಸರಿ . ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ . ನನಗೂ ಮತ್ತು ದಾವಾ ಬಿ ಷಡ್ಯೂಲ್ ಆಸ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ . ಸದರಿ ಆಸ್ತಿಯನ್ನು ನಾನು ಪ್ರಕಾಶ್ ರವರಿಗೆ ಕೊಟ್ಟಿರುತ್ತೇನೆ ಎಂದರು .

ಮರುವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.